



ನೆಹರೂ ಮತ್ತು ಇಂದಿರಾ ಗಾಂಧಿ ಅವರ ಜೊತೆ ರೋರಿಕ್

ನಿಟ್ಟಿಸುವಂತೆಯೇ ಈ ಸಮಾಧಿಯನ್ನು ನಿರ್ಮಿಸಲಾಗಿದೆ. ಅವರ ಇಚ್ಛೆಯಂತೆ ಅವರ ಚಿತಾಭಸ್ಮವನ್ನು ಹಿಮಗಿರಿಯ ಕಣಿವೆ ಕಂದರಗಳಲ್ಲಿ ಸಿಂಪಡಿಸಲಾಗಿತ್ತು.

ನಿಕೋಲಸ್ ರೋರಿಕ್ ಅವರ ಜೀವನಗಾಥೆಯ ಹಲವು ಆಯಾಮಗಳನ್ನು ಕೆಲವೇ ಶಬ್ದಗಳಲ್ಲಿ ವಿವರಿಸುವುದು ಕಷ್ಟ. ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನ ಪ್ರತಿಷ್ಠಿತ ಕುಟುಂಬದಲ್ಲಿ 1874ರಲ್ಲಿ ಜನಿಸಿದ ನಿಕೋಲಸ್ ರೋರಿಕ್, ಕಲಾಪ್ರತಿಭೆ ವಂಶಪಾರಂಪರ್ಯ ಬಳುವಳಿಯೆಂದೇ ಹೇಳಬಹುದು. ಇವರ ಕಲಾ ಪ್ರೌಢಿಮೆಯನ್ನು ಗುರುತಿಸಿ ಎಳವೆಯಲ್ಲೇ ರಷ್ಯಾದ ಅನೇಕ ಪುರಾತನ ಐತಿಹಾಸಿಕ ಸ್ಮಾರಕಗಳ ವರ್ಣಚಿತ್ರಗಳ ಪುನರುತ್ಥಾನ ಕಾರ್ಯವನ್ನು ಇವರಿಗೆ ವಹಿಸಲಾಗಿತ್ತು. ವಾಸ್ತುಶಿಲ್ಪ ಶಾಸ್ತ್ರ ಪ್ರವೀಣರಾದ ರೋರಿಕ್ ರಷ್ಯಾದ ಉದ್ದಗಲಕ್ಕೂ ಹರಡಿದ್ದ ಅನೇಕ ಕೋಟೆ ಕೊತ್ತಲಗಳು, ಚರ್ಚ್, ಮೊನಾಸ್ಟರಿಗಳಲ್ಲದೆ ಪುರಾತನ ಸ್ಮಾರಕಗಳ ನೂರಾರು ವರ್ಣ ಚಿತ್ರಗಳನ್ನು ರಚಿಸಿದರು. ಧಾರ್ಮಿಕ ಸ್ಥಳಗಳಲ್ಲಿ ವರ್ಣ ಚಿತ್ರರಚನೆ, ಪುರಾತನ ಚಿತ್ರಗಳ ದುರಸ್ತಿ ಮಾಡಿರುವುದು ಅವರ ವಿಶೇಷತೆ. ಅಲ್ಲದೆ ರಷ್ಯಾದ ಪ್ರಸಿದ್ಧ ಕಲಾಮಾಧ್ಯಮ ಬ್ಯಾಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ರಂಗಮಂದಿರಗಳು, ಅಪೇರಾಗಳ ರಂಗಸಜ್ಜಿಕೆ, ವಸ್ತ್ರ ವಿನ್ಯಾಸಗಳನ್ನು ಮಾಡಿದ್ದೂ ಆ ಕಾಲದಲ್ಲಿ ಕೀರ್ತಿ ತಂದುಕೊಟ್ಟಿತು.

ಜೀವಿತಾವಧಿಯಲ್ಲಿ 7000ಕ್ಕೂ ಅಧಿಕ ವರ್ಣಚಿತ್ರಗಳು, ರೇಖಾಚಿತ್ರಗಳನ್ನು ರಚಿಸಿದ್ದು ಪ್ರಪಂಚದ ಉದ್ದಗಲಕ್ಕೂ ಅಸಂಖ್ಯ ಸಂಗ್ರಹಾಲಯಗಳು ಹಾಗೂ ಕಲಾರಸಿಕರ ವೈಯಕ್ತಿಕ ಸಂಗ್ರಹದಲ್ಲಿ ಅವುಗಳು ಈಗಲೂ ಕಾಣಸಿಗುತ್ತವೆ. ಪತ್ನಿ ಹೆಲೆನಾರಿಂದಾಗಿ ರೋರಿಕ್ ವೇದಾಂತ ಮತ್ತು ಬೌದ್ಧಧರ್ಮದೆಡೆಗೆ ಆಕರ್ಷಿತರಾದರು. ಧರ್ಮ,ಆಧ್ಯಾತ್ಮ ಹಾಗೂ ಕಾಸ್ಮಿಕ್ ಶಕ್ತಿಯ ಬಗ್ಗೆ ನಂಬಿಕೆ ಅವರ ಜೀವನ ಮಾತ್ರವಲ್ಲದೆ ಚಿತ್ರ ರಚನೆ, ಸಣ್ಣಕತೆಗಳು ಹಾಗೂ ಕವಿತೆಗಳ ಮೇಲೂ ಪ್ರಭಾವ ಬೀರಿತು. ಭಗವದ್ಗೀತೆ, ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಧಾರೆಯೂ ಅವರ ಮೇಲೆ ವಿಶೇಷ ಪ್ರಭಾವ ಬೀರಿರುವುದನ್ನು ಕಾಣಬಹುದು.

ರಷ್ಯಾದಲ್ಲಿ ಕಲಾ ಮಾಧ್ಯಮವಲ್ಲದೆ ರಾಜಕೀಯವಾಗಿಯೂ ಅವರೊಬ್ಬ ಪ್ರಭಾವಿ ವ್ಯಕ್ತಿಯಾಗಿದ್ದರು. ಆದರೆ ರಾಜಕೀಯ ದಬ್ಬಾಳಿಕೆಯಿಂದ ಬೇಸತ್ತು ರಷ್ಯಾ ತೊರೆದು ಫಿನ್ಲೆಂಡ್‌ಗೆ ತೆರಳಿದರು. ಬಳಿಕವೂ ಆ ದೇಶವನ್ನೂ ತೊರೆದು ಲಂಡನ್ನಿಗೆ ಪರಿವಾರ ಸಮೇತ ಬಂದರು. ಅಲ್ಲಿಯೂ ರಾಜಕೀಯ ಕಿರುಕುಳ ಸಹಿಸಲಾಗದೆ ಉತ್ತರ ಅಮೆರಿಕಕ್ಕೆ ವಲಸೆ ಹೋದರು. ಅಲ್ಲಿ ಖ್ಯಾತ ಲೇಖಕ, ತತ್ವಶಾಸ್ತ್ರಜ್ಞ ಎಚ್.ಜಿ. ವೇಲ್ಸ್ ಮತ್ತು ರವೀಂದ್ರನಾಥ ಠಾಗೋರ್ ಜೊತೆಗೆ ಸ್ನೇಹ ಬೆಳೆಯಿತು. ಮುಂದೆ ಅವರ ಪುತ್ರ ಸ್ವೆತಾಸ್ಲೋವ್ ರೋರಿಕ್, ಠಾಗೋರ್ ಅವರ ಸಂಬಂಧಿ ದೇವಿಕಾರಾಣಿಯವರ ಜತೆಗೆ ವಿವಾಹ ಮಾಡಿಕೊಂಡರು.

ನ್ಯೂಯಾರ್ಕ್‌ನಲ್ಲಿ ಹಲವಾರು ವರ್ಷಗಳು ನೆಲೆಸಿದ್ದಾಗ ಸಾಂಸ್ಕೃತಿಕ ಅಭಿವೃದ್ಧಿಗಾಗಿ 'ಸೆಂಟ್ರಲ್ ಏಶಿಯಾಟಿಕ್ ಎಕ್ಸ್‌ಪೆಡಿಶನ್' ಆರಂಭಿಸಿ ಐದು ವರ್ಷಗಳವರೆಗೆ ಏಷ್ಯಾದ ಹಲವಾರು ಪ್ರಮುಖ ದೇಶಗಳನ್ನು ಸಂಚರಿಸಿದರು. ಈ ಅಭಿಯಾನದ ಕೊನೆಯ ಘಟ್ಟವಾಗಿ ಅವರು ಬಂದು ತಲುಪಿದ್ದು ಹಿಮಾಲಯದ ತಪ್ಪಲಿಗೆ. ತತ್ಪರಿಣಾಮವಾಗಿ 'ಹಿಮಾಲಯನ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಸ್ಥಾಪನೆಯ ಅಪೂರ್ವ ಅವಕಾಶ ಭಾರತದ ಪಾಲಾಯಿತು.

ವಿಶ್ವಶಾಂತಿಯ ಬಗ್ಗೆ ಅತೀವ ಕಾಳಜಿ ಹೊಂದಿದ್ದ ರೋರಿಕ್, ರೆಡ್‌ಕ್ರಾಸ್